JSS Mahavidyapeetha, Mysore - 04

# JSS INSTITUTE OF EDUCATION

(Recognized by the NCTE and Affiliated to University of Mysore, Mysore)

Sakleshpur – 573 134, PB No 26, Hassan Dist.

Email: jssioebedskp@gmail.com website: https://jssioebedskp.org.in Phone No: 97405 91647


## ವನಮಹೋತ್ಸವ ಕಾರ್ಯಕ್ರಮ (Vanamahotsava Programme)

ದಿನಾಂಕ 8-7-2022 ಶುಕ್ರವಾರ ದಂದು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯ ಕೌಡಳ್ಳಿ, ಸಕಲೇಶಪುರದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ವಿವಿದ ಬಗೆಯ ಗಿಡಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಹೆಚ್. ಕೆ ಕುಮಾರಸ್ವಾಮಿ ಯವರು, ಶ್ರೀಮತಿ ಶಿಲ್ಪ, ಸಕಲೇಶಪುರ ವಲಯ ಅರಣ್ಯ ಅಧಿಕಾರಿಗಳು, ಶ್ರೀ ಕಾಡಪ್ಪ ನವರು ಪುರಸಭೆ ಅಧ್ಯಕ್ಷರು, ಸಕಲೇಶಪುರ, ಸ.ಬಾ ಭಾಸ್ಕರ್, ಜೆಡಿಎಸ್ ಮುಖಂಡರು, ಸಕಲೇಶಪುರ, ಶ್ರೀ ಹರೀಶ್, ತಾಲ್ಲೂಕು ಕಾರ್ಯ ನಿರ್ವಾಹಣಾ ಅಧಿಕಾರಿಗಳು ಸಕಲೇಶಪುರ, ಶ್ರೀ ತಿಮ್ಮಯ್ಯರವರು ಗ್ರಾ.ಪಂ ಅಧ್ಯಕ್ಷರು, ಆನೆಮಹಲ್ ಗ್ರಾ.ಪಂಚಾಯತಿ, ಶ್ರೀ ರೇಣುಕಾರಾಧ್ಯ, ಮುಖ್ಯಶಿಕ್ಷಕರು, ಜೆಎಸ್‌ಎಸ್ ಪ್ರೌಢಶಾಲೆ, ಕೌಡಳ್ಳಿ, ಶ್ರೀ ರಾಜಪ್ಪ ಪ್ರಭಾರ ಪ್ರಾಂಶುಪಾಲರು ಜೆಎಸ್‌ಎಸ್ ಪಿಯು ಕಾಲೇಜು, ಕೌಡಳ್ಳಿ ಸಕಲೇಶಪುರ, ಶಿಕ್ಷರುಗಳಾದ ಶ್ರೀ ಪ್ರಕಾಶ್, ಶ್ರೀ ನಂಜುಂಡಸ್ವಾಮಿ, ಶ್ರೀಮಂಜುನಾಥ,ಶ್ರೀಶಿವಕುಮಾರ್, ಶ್ರೀಮತಿ ಶ್ವೇತಾ, ಶ್ರೀಮತಿ ರಿಯಾನ, ಶ್ರೀ ಜಗದೀಶ್, ಕಛೇರಿ ಸಿಬ್ಬಂದಿ ಯವರಾದ ಶ್ರೀ ಕನಕರಾಜ, ಶ್ರೀಮತಿ ಸುಜಾತಶೆಟ್ಟಿ, ಗ್ರಂಥಪಾಲಕರಾದ ಶ್ರೀ ಡಮರೇಶ್, ಶ್ರೀ ಮಹೇಶ ಎಸ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಾಸಕರಾದ ಶ್ರೀ ಕುಮಾರಸ್ವಾಮಿಯವರು ಮಾತನಾಡುತ್ತಾ ಜೆಎಸ್‌ಎಸ್ ಪ್ರೌಢಶಾಲೆಯ ಮಕ್ಕಳೊಂದಿಗೆ ವನಮಹೋತ್ಸವದ ಬಗ್ಗೆ, ಸಂವಾದ ನಡೆಸುತ್ತಾ ಶಾಸಕರ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಸಮಂಜಸವಾಗಿ ನೀಡಿದ ಉತ್ತರಕ್ಕೆ ಇದಕ್ಕೆ ಮಾನ್ಯ ಶಾಸಕರು ತುಂಬ ಸಂತೋಷ ಪಟ್ಟರು..ಇದರಂತೆ ಪ್ರತಿ ವರ್ಷ ವನಮಹೋತ್ಸವ ಕಾರ್ಯಕ್ರಮದಲ್ಲಿ 100 ವಿವಿದ ಜಾತಿಯ ಸಸಿಗಳನ್ನು ನೆಡಿಸಲು ಉಪಸ್ಥಿತರಿದ್ದ ಎಲ್ಲರಿಗೂ ಶಾಸಕರು ಸೂಚಿಸಿದರು. ಕಾರ್ಯಕ್ರಮಲ್ಲಿ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು, ಪ್ರಶಿಕ್ಷಣಾರ್ಥಿಗಳು ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಜರಿದ್ದರು.






PRINCIPAL
J.S.S. Institute of Education
P.B. 26, SAKALESHPUR-573 134
Hassan Dist

JSS Mahavidyapeetha, Mysore - 04
# JSS INSTITUTE OF EDUCATION
(Recognized by the NCTE and Affiliated to University of Mysore, Mysore)
Sakleshpur – 573 134, PB No 26, Hassan Dist.
Email: jssioebedskp@gmail.com website: https://jssioebedskp.org.in Phone No: 97405 91647

## ಸಸಿ ನೆಡುವ ಕಾರ್ಯಕ್ರಮ - TREE PLANTING PROGRAMME

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 30-07-2022 ರ ಶನಿವಾರ ಸ್ವಾತಂತ್ರ್ಯದ 75 ನೇ ವರ್ಷಾಚರಣೆಯ ಪ್ರಯುಕ್ತ ಕಾಲೇಜು ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.







ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಚಾಲನೆ ನೀಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಬಿ.ಎ ರಾಜಶೇಖರ ರವರು ಮಾತನಾಡುತ್ತಾ, 75 ವರ್ಷಗಳ ಸ್ವಾತಂತ್ರ್ಯದ ಹಬ್ಬವು ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಮತ್ತು ಅದರ ತ್ಯಾಗವನ್ನು ಅನುಭವಿಸುವ ರೀತಿಯಲ್ಲಿ, ದೇಶದ ಹುತಾತ್ಮರಿಗೆ ಗೌರವ ಸಲ್ಲಿಸುವ ರೀತಿಯಲ್ಲಿ ಮತ್ತು ಅವರ ಕನಸಿನ ಭಾರತ ರೂಪಿಸುವ ನಿರ್ಧಾರ, ಅದರೊಂದಿಗೆ ಅಂದಿನ ಸಾಂಪ್ರದಾಯಿಕ ಭಾರತದ ವೈಭವವನ್ನು ಒಳಗೊಂಡ ನೋಟಗಳು ಇರಬೇಕು ಹಾಗು ಅದರಲ್ಲಿ ಆಧುನಿಕ ಭಾರತದ ಹೊಳಪೂ ಇರಬೇಕು. ಸಂತರ ಆಧ್ಯಾತ್ಮದ ಬೆಳಕು, ನಮ್ಮ ವಿಜ್ಞಾನಿಗಳ ಪ್ರತಿಭೆ ಮತ್ತು ಶಕ್ತಿಯ ಅಂಶವನ್ನೂ ಅದು ಒಳಗೊಂಡಿರಬೇಕು. ಈ ಕಾರ್ಯಕ್ರಮ ನಮಗೆ ನಮ್ಮ 75 ವರ್ಷಗಳ ಸಾಧನೆಯನ್ನು ವಿಶ್ವದೆದುರು ಮಂಡಿಸಲು ಮತ್ತು ಮುಂದಿನ 25 ವರ್ಷಗಳ ಅವಧಿಗೆ ನೀಲ ನಕಾಶೆಯನ್ನು ರೂಪಿಸಲು ಮತ್ತು ನಿರ್ಧಾರಗಳನ್ನು ಕೈಗೊಳ್ಳಲು ಒಂದು ಅವಕಾಶವಾಗಿದೆ. ನಾವು ಎಲ್ಲಿ ಇರಬೇಕು, ವಿಶ್ವದಲ್ಲಿ ನಮ್ಮ ಸ್ಥಾನ ಏನಾಗಿರಬೇಕು, 2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುವಾಗ ನಾವು ಭಾರತವನ್ನು ಎಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಎಂಬುದಕ್ಕೂ ಇದೊಂದು ಅವಕಾಶ. ಸ್ವಾತಂತ್ರ್ಯದ 75 ವರ್ಷಗಳು ಮತ್ತು ಸ್ವಾತಂತ್ರ್ಯ ಹೋರಾಟ ನಮಗೆ ಸ್ಫೂರ್ತಿಯೊದಗಿಸುತ್ತದೆ. ಸ್ವಾತಂತ್ರ್ಯದ 75 ನೇ ವರ್ಷಾಚರಣೆಯ ಈ

ಹಬ್ಬ ಭಾರತದ ಸ್ವಾತಂತ್ರ್ಯದ ಶತಮಾನೋತ್ಸವಕ್ಕಾಗಿ ನಮಗೆ ಮಾರ್ಗದರ್ಶನ, ಉತ್ತೇಜನ ಮತ್ತು ಸಾಧನೆಯ ಭಾವವನ್ನು ಮೂಡಿಸಲು ವೇದಿಕೆಯೊಂದನ್ನು ತಯಾರು ಮಾಡಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗೌರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಸಕಲೇಶಪುರ ಕಾಫಿ ಬೆಳೆಗಾರರಾದ ಶ್ರೀ ಬಿ.ಡಿ ಬಸವಣ್ಣರವರು, ಗೌರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಹಾಸನ ಹೇಮ ಗಂಗೋತ್ರಿಯ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ. ಮಹದೇವಪ್ಪ, ಪ್ರಾಂಶುಪಾಲರಾದ ಡಾ. ನಂಜುಂಡಪ್ಪ, ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ್ ಆರ್, ನ್ಯಾಕ್ ಸಂಯೋಜನಾಧಿಕಾರಿಗಳಾದ ಡಾ. ದಿನೇಶ್ ಎಂ.ಕೆ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.







JSS Institute of Education Sakleshpura, Hassan Dist.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist